ಸ್ವರಗಳು ಎರಡು ಉತ್ತರಿಸಿರಿ.

ಈ. ಈ ಕೆಳಗಿನ ವಾಕ್ಯಗಳನ್ನು ಯಾರು / ಯಾರಿಗೆ ಹೇಳಿದರು.

1 "ಎಂಥ ಕೆಲಸ ಆಗಿಹೋಯಿತು".

ಉ ಈ ಮಾತನ್ನು ಅಕ್ಬರನು ಬೀರಬಲ್ಲನಿಗೆ ಹೇಳಿದನು.

2. "ಕಳೆದು ಹೋದದ್ದನ್ನು ಮತ್ತೆ ಪಡೆಯಲಾಗದ್ದು ಯಾವುದು?"

ಉ. ಈ ಮಾತನ್ನು ಅಬುಲ್‌ಫಸಲ್ ಸಾಧುವೇಶದಲ್ಲಿದ್ದ ಬೀರಬಲ್ಲನಿಗೆ ಹೇಳಿದನು.

3. ನನ್ನ ಮಂತ್ರಿ ಬೀರಬಲ್ ಕಾಣೆಯಾಗಿದ್ದಾನೆ".

ಉ. ಈ ಮಾತನ್ನು ಅಕ್ಬರ್ ತನ್ನಲ್ಲಿಯೇ ಹೇಳಿ ಕೊಂಡನು.

ಈ. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆಯ್ದು ಖಾಲಿ ಬಿಟ್ಟಿರುವ ಸ್ಥಾನವನ್ನು ಭರ್ತಿ ಮಾಡಿ.

1. ಅಕ್ಬರನಿಗೆ ______________ ಮೇಲೆ ಅಸಮಾಧಾನ ಉಂಟಾಯಿತು.

ಅ) ಮಾನ್ ಸಿಂಗ್ ಆ) ತೋದರಮಲ್ಲ

ಆ) ತಾನ್ ಸೇನ್ ಈ) ಬೀರಬಲ್



Scanned with CamScanner

2. ಬೀರಬಲ್ಲನು ಅಕ್ಬರನ ಆಸ್ಥಾನಕ್ಕೆ ________ ವೇಷದ
ಬಂದಿದ್ದನು.

ಅ) ಮಂತ್ರಿ ಆ) ಸಾಧು

ಇ) ವಿದ್ವಾಂಸ ಈ) ವ್ಯಾಪಾರಿ

3. ಮಾರುತಕ್ಕಿಂತ ವೇಗವಾದುದು ________

ಅ) ಜ್ಞಾನ ಆ) ಧೈರ್ಯ

ಇ) ಕಲ್ಪನೆ ಈ) ಸ್ವಾರ್ಥ

## ಭಾಷಾಭ್ಯಾಸ

ಅ. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

1. ಅಸಮಾಧಾನ × ಸಮಾಧಾನ
2. ಮಿತ್ರ × ಶತ್ರು
3. ಸೇವಕ × ರಾಜ, ಯಜಮಾನ
4. ಬುದ್ಧಿವಂತ × ಬುದ್ಧಿಮಾಂದ್ಯ
5. ಜ್ಞಾನ × ಅಜ್ಞಾನ
6. ಸಿಹಿ × ಕಹಿ
7. ನಗು × ಅಳು
8. ಸ್ವಾರ್ಥ × ನಿಸ್ವಾರ್ಥ

ಆ. ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

1. ತವಕ : ನಾನು ಪರೀಕ್ಷೆಯ ಫಲಿತಾಂಶವನ್ನು ತವಕದಿಂದ ಕಾಯುತ್ತಿದ್ದೆ.
2. ಮೇಧಾನಿ : ಬೀರಬಲ್ಲನು ಬಹಳ ಮೇಧಾವಿಯಾಗಿದ್ದನು
3. ತೇಜಸ್ವಿ : ವಿವೇಕಾನಂದರು ಒಬ್ಬ ತೇಜಸ್ವಿ ಬಾಲಕನಾಗಿದ್ದನು.
4. ಉಡುಗೊರೆ : ನನ್ನ ತಾಯಿ ನನಗೆ ಒಂದು ಪೆನ್ನನ್ನು ಉಡುಗೊರೆಯಾಗಿ ಕೊಟ್ಟರು.
5. ಜ್ಞಾನ : ಪುಸ್ತಕಗಳನ್ನು ಓದುವುದರಿಂದ ನಮ್ಮ ಜ್ಞಾನ ಹೆಚ್ಚುತ್ತದೆ.

ಇ. ಇಲ್ಲಿರುವ ಪದಗಳನ್ನು ಬಿಡಿಸಿ ಬರೆಯಿರಿ.

1. ಅತ್ಯುತ್ತಮ = ಅತಿ + ಉತ್ತಮ
2. ಅವನೊಬ್ಬ = ಅವನು + ಒಬ್ಬ
3. ಮುಖವನ್ನು = ಮುಖ + ಅನ್ನು
4. ಕಾಣೆಯಾಗು = ಕಾಣೆ + ಆಗು

Scanned with CamScanner

ಆ. ಈ ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.

1. ಕುವೆಂಪು ಬೇಂದ್ರೆ ಕಾರಂತ ಮಾಸ್ತಿ ವಿನಾಯಕ ಅನಂತಮೂರ್ತಿ ಕಾರ್ನಾಡ ಕಂಬಾರ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.

ಉ. ಕುವೆಂಪು, ಬೇಂದ್ರೆ, ಕಾರಂತ ಮಾಸ್ತಿ, ವಿನಾಯಕ, ಅನಂತಮೂರ್ತಿ, ಕಾರ್ನಾಡ, ಕಂಬಾರ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.

2. ಬಸವಣ್ಣನವರು ದಯವೇ ಧರ್ಮದ ಮೂಲ ಎಂದು ಹೇಳಿದರು?

ಉ. ಬಸವಣ್ಣನವರು "ದಯವೇ ಧರ್ಮದ ಮೂಲ" ಎಂದು ಹೇಳಿದರು.

3. ಪಂಪ ಯಾವ ಶತಮಾನದ ಕವಿ

ಉ. ಪಂಪ ಯಾವ ಶತಮಾನದ ಕವಿ?

4. ಅಯ್ಯೋ ವಿಧಿ ಬರೆಹವನ್ನು ಯಾರೂ ಅಳಿಸಲಾರರು.

ಉ. ಅಯ್ಯೋ! ವಿಧಿ ಬರೆಹವನ್ನು ಯಾರೂ ಅಳಿಸಲಾರರು.

ಇ. ಈ ಕೆಳಗಿನ ವಾಕ್ಯಗಳನ್ನು ಪ್ರಶ್ನಾರ್ಥಕ ವಾಕ್ಯಗಳನ್ನಾಗಿ ಪರಿವರ್ತಿಸಿರಿ.

1. ಅಕ್ಬರನಿಗೆ ಬೀರಬಲ್ಲನ ಮೇಲೆ ಅಸಮಾಧಾನ ಉಂಟಾಯಿತು.

ಉ. ಅಕ್ಬರನಿಗೆ ಯಾರ ಮೇಲೆ ಅಸಮಾಧಾನ ಉಂಟಾಯಿತು?

2. ಅಕ್ಬರ್ ಬೀರಬಲ್ಲನಿಗಾಗಿ ಹುಡುಕಾಡಿಸಿದ.

ಉ. ಅಕ್ಬರ್‌ನು ಯಾರಿಗಾಗಿ ಹುಡುಕಾಡಿದ?

3. ಸಾಧುವಿನ ವೇಷದಲ್ಲಿ ಬಂದಿದ್ದವನು ಬೀರಬಲ್ಲನೇ ಆಗಿದ್ದ.

ಉ. ಸಾಧುವಿನ ವೇಷದಲ್ಲಿ ಬಂದಿದ್ದವನು ಯಾರು?

Scanned with CamScanner